

# ಅಜ್ಜಿಮನೆ ಸೌಂದರ್ಯದ ಗೂಡು..!

ಈಗ ಮಾರುಕಟ್ಟೆಯಲ್ಲಿ ಸಿಗುವ ಸೌಂದರ್ಯವರ್ಧಕಗಳಲ್ಲಿ ತ್ವಚೆ, ತಲೆಕೂದಲನ್ನು ಹಾನಿ ಮಾಡುವ ರಾಸಾಯನಿಕಗಳಿರುತ್ತವೆ. ಇವುಗಳ ದೀರ್ಘಬಳಕೆಯಿಂದ ಹಲವಾರು ಅಡ್ಡಪರಿಣಾಮಗಳೂ ಉಂಟಾಗುತ್ತವೆ. ನೈಸರ್ಗಿಕವಾಗಿಯೇ ಸಿಗುವ ಹಣ್ಣು, ತರಕಾರಿ, ಹಾಲು, ದಿನಸಿ ಸಾಮಾನುಗಳನ್ನೇ ಬಳಸಿ ಫೇಷಿಯಲ್, ಮಸಾಜ್, ಹೇರ್‌ಪ್ಯಾಕ್, ಹೇರ್‌ಟ್ರೀಟ್‌ಮೆಂಟ್‌ಗಳನ್ನು ಮಾಡಿ ಸೌಂದರ್ಯ ಕಾಪಾಡಿಕೊಳ್ಳಬಹುದು. ಇದೇ ಪರಿಕಲ್ಪನೆಯಲ್ಲಿ ಸಾಕಾರಗೊಂಡಿರುವುದು ಬೆಂಗಳೂರಿನ ರೇಖಾ ರಾವ್ ಅವರ 'ಅಜ್ಜಿಮನೆ ಸೌಂದರ್ಯದ ಗೂಡು..!

**■ ಉಮಾ ಅನಂತ್**

ಅದೊಂದು ಕಾಲವಿತ್ತು. ಮನೆಯ ತುಂಬ ಜನ. ಅಜ್ಜ ಅಜ್ಜಿಯರಿಂದ ಹಿಡಿದು ಮೊಮ್ಮಕ್ಕಳವರೆಗಿನ ಕೂಡು ಕುಟುಂಬ, ಸುಖೀ ಸಂಸಾರ. ಅಜ್ಜಿ ಮೊಮ್ಮಗಳಿಗೆ ದಿನಾ ತಲೆಕೂದಲಿಗೆ ಎಣ್ಣೆ ಹಚ್ಚಿ ಸೊಂಪಾಗಿ ಬೆಳೆದ ಕೂದಲನ್ನು ಬಾಚಿ ಉದ್ದನೆಯ ಜಡೆ ಹೆಣೆದು ಮಲ್ಲಿಗೆ ದಂಡೆ ಮುಡಿಸಿ ಶಾಲೆಗೆ ಕಳಿಸುತ್ತಿದ್ದರು. ಸ್ನಾನ ಮಾಡಿಸುವಾಗಲೂ ಅಷ್ಟೆ, ಯಾವ ಶಾಂಪು ಕಂಡಿಷನರ್ ಬಳಸುತ್ತಿರಲಿಲ್ಲ. ಹಂಡೆ ತುಂಬ ಬಿಸಿ ನೀರು ಕಾಯಿಸಿ ಸೀಗೆಕಾಯಿ, ಅಂಟುವಾಳಕಾಯಿ ಬಳಸಿ ಬಿಸಿನೀರು ಎರೆದು ಮಾಡಿಸುತ್ತಿದ್ದ ಸ್ನಾನ. ಮೈಗೆ ಕಡಲೆಹಿಟ್ಟಿನ ಲೇಪ. ಮುಖಕ್ಕೆ ಬೇಕಿದ್ದರೆ ತಾಜಾ ಹಣ್ಣು, ಆಲೂಗಡ್ಡೆ ಟೊಮ್ಯಾಟೊ ಬಳಸಿ ಮಾಡಿದ ಮುಖಲೇಪ... ಯಾವ ಫೇಷಿಯಲ್ ಇಲ್ಲ, ಫೇಸ್‌ಪ್ಯಾಕ್ ಕೂಡ ಇಲ್ಲ.

ಕಾಲ ಬದಲಾದಂತೆ ಸೌಂದರ್ಯ ಕಾಪಾಡುವಲ್ಲೂ ಸಾಕಷ್ಟು ಮಾರ್ಪಾಡು. ಈಗ ತಲೆ ಸ್ನಾನಕ್ಕೆ ಬಳಸುವುದು ರಾಸಾಯನಿಕಯುಕ್ತ ಶಾಂಪು, ಕಂಡಿಷನರ್, ಮುಖ, ಕೈಕಾಲು ಸೇರಿದಂತೆ ತ್ವಚೆಗೆ ಕ್ರೀಮ್, ಪೌಡರ್, ಫೌಂಡೇಷನ್, ತುಟಿಗೆ ಲಿಪ್‌ಸ್ಟಿಕ್, ಕಣ್ಣಿಗೆ ಐಲೈನರ್.. ಇತ್ಯಾದಿ.



ರೇಖಾ ರಾವ್

ರಾಸಾಯನಿಕಯುಕ್ತ ಸೌಂದರ್ಯ ಸಾಧನಗಳಿಂದ ಅಡ್ಡಪರಿಣಾಮ ಹೆಚ್ಚುತ್ತಿದೆ ಎಂದು ಜನರಿಗೆ ಅರಿವಿಗೆ ಬರಲು ತೊಡಗಿದಂತೆ ನಗರದಲ್ಲೆಲ್ಲ ದಿಢೀರ್ ಆಗಿ ಹುಟ್ಟಿಕೊಂಡವು 'ಹರ್ಬಲ್ ಪಾರ್ಲರ್'ಗಳು. ಇಲ್ಲೂ ಹೆಚ್ಚಿನ ಪಾರ್ಲರ್‌ಗಳಲ್ಲಿ ಬಳಸುವುದು ಹರ್ಬಲ್ ಹೆಸರಿನ ಕೆಮಿಕಲ್‌ಗಳನ್ನೇ. ಅಲೊವೆರಾ, ಶಿಕಾಕಾಯಿ, ಬಾದಾಮಿ, ಆಲೂಗಡ್ಡೆ, ಪಪ್ಪಾಯ ಮುಂತಾದವುಗಳ ಚಿತ್ರ ಹಾಕಿ ಪ್ಯಾಕ್ ಮಾಡಿದ ಸೌಂದರ್ಯ ಸಾಧನಗಳ ಸುಂದರ ಡಿಸ್‌ಪ್ಲೇ ಇಲ್ಲಿರುತ್ತದೆ. ಆದರೆ ಅಸಲಿಗೆ ಇವುಗಳೂ ರಾಸಾಯನಿಕಗಳಿಂದ ಕೂಡಿದ ಉತ್ಪನ್ನಗಳೇ. ಇದಕ್ಕೆ ದುಬಾರಿ ಬೆಲೆ ಬೇರೆ.